

# ಮಿಡಿಮಾವು

ರಾಜ್ಯಮಟ್ಟದ ದ್ವಿತೀಯ

## ಮಕ್ಕಳ ಸಾಹಿತ್ಯ ಸಮ್ಮೇಳನ

## ಧಾರವಾಡ

೨೬, ೨೭ ಅಕ್ಟೋಬರ ೧೯೮೫

894.814 115
KAR
05435

# ಮಿಡಿಮಾವು

## ರಾಜ್ಯಮಟ್ಟದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದ

## ಸ್ಮರಣ ಸಂಚಿಕೆ

894.814 115 43
KAR

00543

೨೬, ೨೭ ಅಕ್ಟೋಬರ್ ೧೯೮೫

ಕೊಡುಗೆ / /

ಇಂದ: ಪಿ.ಕೆ. ಪುರಾಣಿಕ
ಶ್ರೀಗಿರಿ ಪ್ರಕಾಶನ, "ಶ್ರೀಗಿರಿ"
4/5ಎ, ಅಲಿ ಆಸ್ಕರ ರಸ್ತೆ,
ಬೆಂಗಳೂರು – 560 052
Tel: 22264361

ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ ಮತ್ತು ರಾಜ್ಯಮಟ್ಟದ
ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ, ಧಾರವಾಡ

ಸಮ್ಮೇಳನಾಧ್ಯಕ್ಷರು



ಡಾ. ಸಿದ್ಧಯ್ಯ ಪುರಾಣಿಕ

ಸಮ್ಮೇಳನಾಧ್ಯಕ್ಷ

## ಡಾ. ಸಿದ್ಧಯ್ಯ ಪುರಾಣಿಕ

'ಹುಟ್ಟಿಸುವುದಾದರೆ ನನ್ನನ್ನು ಕನ್ನಡನಾಡಿನಲ್ಲಿಯೇ ಹುಟ್ಟಿಸು ತಂದೆ' ಎಂದು ಅನನ್ಯಭಾವದಿಂದ ಸ್ವತಂತ್ರ ಧೀರ ಸಿದ್ಧೇಶ್ವರನನ್ನು ಮೊರೆಹೊಕ್ಕ, ಸದುವಿನಯವೇ ಮೂರ್ತಿವೆತ್ತು ಬಂದಂತಿದ್ದವರು ಸಿದ್ಧಯ್ಯ ಪುರಾಣಿಕರು. ಅವರನ್ನು ಕಂಡವರಿಗೆ 'ಮುಗಿದ ಕೈ ಬಾಗಿದ ತಲೆಯಾಗಿರಿಸು ಕೂಡಲಸಂಗಮದೇವ' ಎಂಬ ಬಸವಣ್ಣನವರ ನುಡಿಮುತ್ತು ನೆನಪಾಗದೆ ಇರದು. ಅಂತಹ ಶರಣಜೀವನ ಸಮನ್ವಯಿಸಿಕೊಂಡ ಶರಣ ಸಂಸ್ಕೃತಿಯ ಸತ್ಪುತ್ರರು ಶ್ರೀ ಸಿದ್ಧಯ್ಯ ಪುರಾಣಿಕ. ಆತ್ಮೀಯತೆಯ ನಡೆ ನುಡಿ ಸಂಸ್ಕೃತಿಯ ಪ್ರತೀಕರಾದ ಪುರಾಣಿಕರು ಸಮಭಾವ, ಸಮಚಿತ್ತಗಳ ಸಮನ್ವಯ ಸ್ವರೂಪರು; ಕಾವ್ಯಯೋಗ–ಕರ್ಮಯೋಗಗಳನ್ನು ಮೇಳವಿಸಿಕೊಂಡು ಬದುಕಿದವರು; ಪ್ರತಿಭಾನ್ವಿತರು, ಚಿಂತನಶೀಲರು, ಅನುಭಾವಿಗಳು, ಮೇಲಾಗಿ ಆಧುನಿಕ ವಚನಕಾರರು; ಮಕ್ಕಳ ಸಾಹಿತ್ಯಕ್ಕೆ ಅನುಪಮ ಕೊಡುಗೆ ನೀಡಿದವರು; ಸಮಕಾಲೀನ ಬದುಕಿಗೆ ಸ್ಪಂದಿಸಿ ನಿಂದವರು.

'ಕಾವ್ಯಾನಂದ' ಕಾವ್ಯನಾಮದಿಂದ ಖ್ಯಾತರಾಗಿರುವ ಪುರಾಣಿಕರು ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ದ್ಯಾಂಪುರದವರು. ಸಂಸ್ಕಾರವಂತ ಮನೆತನ. ಅಜ್ಜ ಆಗಲೇ ಕಾವ್ಯಕ್ಷೇತ್ರದಲ್ಲಿ ಹೆಸರುಗಳಿಸಿದ್ದ ದ್ಯಾಂಪುರ ಚೆನ್ನಕವಿಗಳು. ತಂದೆ ಕಲ್ಲಿನಾಥಶಾಸ್ತ್ರಿಗಳದು ಪುರಾಣ ಪ್ರವಚನದಲ್ಲಿ ಎತ್ತಿದ ಕೈ. ಪುರಾಣಿಕರಿಗೆ ಪ್ರಥಮ ಗುರುಸ್ಥಾನ ತುಂಬಿಕೊಟ್ಟವರು ಸೋದರಮಾವ ಕಾಲಕಾಲೇಶ್ವರ ಶಾಸ್ತ್ರಿಗಳು. ಈ ಸಾಹಿತ್ಯಿಕ ಪರಿಸರ ಅವರನ್ನು 'ಕಾವ್ಯಾನಂದ'ರನ್ನಾಗಿ ರೂಪಿಸಿತು. ಇದನ್ನು ಮನಗಂಡರೆ

........................ ನಿಂ<br>
ದಿರೆ ದಂಡಾಧೀಶಂ ಕು<br>
ಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನದೇವ

ಎಂಬ ಕವಿ ಚಕ್ರವರ್ತಿಯ ಹೇಳಿಕೆ ಸಮಯೋಚಿತವೆನಿಸುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಅವರನ್ನು ತಲೆ ಎತ್ತಿ ನಿಲ್ಲುವಂತೆ ಮಾಡಿದುವು ಅವರ ಅವಿರತ ಸಾಧನೆ, ಚಿಂತನಶೀಲ ಪ್ರವೃತ್ತಿ, ಸ್ವತಂತ್ರ ಧ್ಯೇಯ ಧೋರಣೆಗಳು.

ಪ್ರೌಢದೆಸೆಯಲ್ಲಿದ್ದಾಗಲೇ ಕಾವ್ಯಾನಂದರ ಕಾವ್ಯಗಂಗೆ ಪ್ರವಹಿಸತೊಡಗಿದಳು. ಕಲ್ಬುರ್ಗಿಯ ಕನ್ನಡ ಚಳುವಳಿಯ ಭಾಷಣ, ಊರಿನ ತರುಣ ಸಂಘದ ಕವನ ಸ್ಪರ್ಧೆಗಳು, 'ಮಿಂಚು' ಕೈ ಬರಹ ಪತ್ರಿಕೆಯ ಸಂಪಾದನೆ, ಅವರನ್ನು ತರುಣ ಬರಹಗಾರರನ್ನಾಗಿಸಿದವು. 'ಜಯಕರ್ನಾಟಕ' ಮಾಸಪತ್ರಿಕೆ ಅವರ ಕಾವ್ಯ ಕೃತಿಯನ್ನು ಪ್ರಕಟಪಡಿಸುವ ಜನಪ್ರಿಯ ಮಾಧ್ಯಮವಾಯಿತು.

ನಿನ್ನಾತ್ಮವಾನಂದ 'ನನ್ನಾತ್ಮ ಕಾವ್ಯ'<br>
ಇಂತು ಕಾವ್ಯಾನಂದ ನಾಮ ಸುಶ್ರಾವ್ಯ

ಈ ಸಮಯದಲ್ಲಿ ಅವರು ಬರೆದ ಕಾವ್ಯದೇವಿ ಎಂಬ ಕವನ ಅವರ ಕಾವ್ಯನಾಮವನ್ನು 'ಕಾವ್ಯಾನಂದ'ವನ್ನಾಗಿಸಿತು. ಹೈದರಾಬಾದಿನಲ್ಲಿ ಬಿ. ಎ. ಪ್ರಥಮ ಸ್ಥಾನ ಪಡೆದ ಸಿದ್ಧಯ್ಯನವರು ತಹಸೀಲ್ದಾರರಾಗಿ ತಮ್ಮ ಕರ್ಮಯೋಗ ಪ್ರಾರಂಭಿಸಿದರು. ಅಲ್ಲಿಂದೀಚೆಗೆ ಹಿಂದಿನ ಹೈದರಾಬಾದು, ಇಂದಿನ ಕರ್ನಾಟಕ ಸರಕಾರದ ನಾನಾ ಇಲಾಖೆಗಳಲ್ಲಿ ಶ್ರದ್ಧೆಯಿಂದ ಕಾರ್ಯನಿರ್ವಹಿಸಿ ದಕ್ಷ, ಪ್ರಾಮಾಣಿಕ ಅಧಿಕಾರಿಯೆನಿಸಿಕೊಂಡಿದ್ದಾರೆ. ವೃತ್ತಿಪ್ರವೃತ್ತಿಗಳೆರಡು ವಿರೋಧಾತ್ಮಕವಾಗಿದ್ದರೂ ಐ. ಎ. ಎಸ್. ದಂತಹ ಅಧಿಕಾರದ ಸೂತ್ರಧಾರಕರಾಗಿದ್ದು ಜನ್ಮಜಾತವಾಗಿ ಬಂದಿದ್ದ ಸಾಹಿತ್ಯ ಕ್ಷೇತ್ರದ ದುಡಿಮೆ ಮಾಡಿಕೊಂಡಿದ್ದಾರೆ. ವೃತ್ತಿನಿಷ್ಠೆಯಂತೆ ಕರ್ತವ್ಯ ಪರಾಯಣರಾಗಿ ಸವ್ಯಸಾಚಿಯಂತೆ ಬಹುಮುಖ ಸಾಹಿತ್ಯ ಸೇವೆ ಸಲ್ಲಿಸಿ ಶ್ರೇಷ್ಠ ಸಾಹಿತಿಗಳೆನಿಸಿದ್ದಾರೆ.

ಸಿದ್ದಯ್ಯನವರ ಒಲವು ಮಕ್ಕಳ ಸಾಹಿತ್ಯದೆಡೆಗೆ ಹರಿದುದಕ್ಕೆ ಕಾರಣ ಅವರ ಮಕ್ಕಳಂತಹ ಮುಗ್ಧ ಮನೋಭಾವ. ಮಕ್ಕಳ ಭಾವನೆಗೆ ನಿಲುಕಬಲ್ಲ ವಿಷಯವನ್ನೆತ್ತಿಕೊಂಡು ಸರಳವಾಗಿ, ಭಾವಪೂರ್ಣವಾಗಿ ಹೇಳಬಲ್ಲ ಕಲೆ ಅವರಿಗೆ ಕರಗತವಾಗಿದೆ. ಅವರ ಕಾವ್ಯಸೂತ್ರ ಹೊಸತನವನ್ನು ವ್ಯಕ್ತಪಡಿಸದೆ ಹೋದರೂ ಕವಿ ಹೇಳುವ ರೀತಿಯಲ್ಲಿ ನಾವಿನ್ಯತೆ ಇದೆ. ಅವರೇ ಒಂದೆಡೆ ಹೇಳುವಂತೆ

ಬಗೆಯ ಬಾನಲಿ ಬಣ್ಣ ವೇಳರ
ಬಿಲ್ಲ ದಿಬ್ಬಣ ಸಾಗಿದೆ.
ಎಲ್ಲೊ ಒಂದೆಡೆ ಭಾವಬುದ್ಧಿಯು
ಹಸೆಗೆ ನಿಲ್ಲುವ ಹಾಗಿದೆ.

ಎಂಬಲ್ಲಿ ಆ ವಿಶೇಷತೆಯ ಅಂಶ ಸ್ಪಷ್ಟವಾಗದೆ ಇರದು. ಚೇತನ ಅಚೇತನ ವಸ್ತುಗಳಲ್ಲಿ ಸತ್ವವನ್ನರಸುವುದು ಇವರ ಕಾವ್ಯಗುಣ. 'ಭಾವವಿಲ್ಲದ ಬುದ್ಧಿ ನೀರಸವಾದರೆ, ಬುದ್ಧಿ ಇಲ್ಲದ ಭಾವ ಅತಂತ್ರವಾಗುತ್ತದೆ' ಎಂಬ ತತ್ವವನ್ನು ಮನಗಂಡವರು ಪುರಾಣಿಕರು.

ಗುರುಗಳಾದ ಪ್ರೊ ಡಿ ಕೆ. ಭೀಮಸೇನರಾಯರ ಪ್ರೇರಣೆ ಇವರನ್ನು ಮಕ್ಕಳಸಾಹಿತಿಗಳನ್ನಾಗಲು ಹುರಿದುಂಬಿಸಿತು. 'ಅಜ್ಜನ ಕೋಲಿದು ನನ್ನಯ ಕುದುರೆ', 'ಕರಡಿಯ ತಕತಕ ಕುಣಿಸುತ ಬಂದನು ಸಿದ್ದಿ ಸಿದ್ದಿ ಬಾವಾ' ಎಂಬ ಕವನಗಳು ಅವರ ಮಕ್ಕಳ ಕಾವ್ಯಕೃಷಿಯ ಮೊದಲ ಕುಡಿಗಳು. ಮಕ್ಕಳಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಕಾಸವಾಣಿ, ಅವರ ಮೊದಲ ಕೃತಿ. ಮಕ್ಕಳ ಕವನ ಸಂಗ್ರಹ 'ತುಪ್ಪಾ ರೊಟ್ಟಿ ಗೇಗೇ' ೧೯೫೪ ರಲ್ಲಿ ಬೆಂಗಳೂರಿನ ಕರ್ನಾಟಕ ಸರಕಾರಿ ಪ್ರಕಾಶನ ಮಂದಿರದಿಂದ ಪ್ರಕಟವಾಯಿತು. ಅದು ಭಾರತ ಸರಕಾರದ ಪುರಸ್ಕಾರವನ್ನು ಕಂಡಿತಲ್ಲದೆ ೧೯೭೩ ರಲ್ಲಿ ಪುನರ್ಮುದ್ರಣ ಪಡೆದುದು ಅದರ ಜನಪ್ರಿಯತೆಗೆ ಸಾಕ್ಷಿಯೆನಿಸಿದೆ. 'ಗಿಲ್‌ಗಿಲ್ ಗಿಲಗಂಚಿ', 'ತಿರುಗು ತಿರುಗೆಲೆ ತಿರುಗುಯ್ಯಾಲೆ' ಇವರ ಇನ್ನಿತರ ಮಕ್ಕಳ ಕವನ ಸಂಕಲನಗಳು.

ಸಿದ್ದಯ್ಯನವರು ಪ್ರಕೃತಿ ಸೌಂದರ್ಯೋಪಾಸಕರು. ಪ್ರಕೃತಿ ಅವರ ಪಾಲಿಗೆ ಪ್ರೇರಕಶಕ್ತಿಯಾಗಿದೆ. ಪ್ರಕೃತಿಯ ಮುಂದೆ ಕವಿ ಹೃದಯ ಒಮ್ಮೊಮ್ಮೆ ಮುಗ್ಧ ಮಗುವಿಗಾಗಿ ಅದರ ಸೌಂದರ್ಯದಲ್ಲಿ ಲೀನವಾಗುತ್ತದೆ. ವರ್ಷಾಕಾಲದ ಮೇಘ, ಮಿಂಚು ಅವರ ಕಲ್ಪನೆಗೆ ಹೊಸತಾದ ಬೀಜ ಬಿತ್ತಿವೆ. ಕವಿಕಲ್ಪನೆಯ ಸಹಜ ವ್ಯಾಪಾರಕ್ಕಿಂತ ಇಲ್ಲಿ ಮಳೆ, ಮೋಡ, ಬಯಲುಗಳ ಸೌಂದರ್ಯ ಕವಿಯನ್ನು ಸೌಂದರ್ಯಾರಾಧಕರನ್ನಾಗಿಸಿದೆ. ಬಯಲು ನಾಡಿನ ಕವಿಯಾದ ಇವರು ಬೇಂದ್ರೆಯವರ ದೃಷ್ಟಿಯಲ್ಲಿ ಉತ್ತರ ಕರ್ನಾಟಕದ ಕುವೆಂಪು ಎಂದು ಕರೆಸಿಕೊಂಡಿದ್ದರು. ಪ್ರಕೃತಿ ರಮಣೀಯಂತೆಯು ಭಾವಚಿತ್ರಗಳು ಇವರಲ್ಲಿ ಜೀವಚಿತ್ರಗಳಾಗಿ ಹೊರಹೊಮ್ಮಿವೆ.

ತೊಟ್ಟಿಲಲಿ ಮಲಗಿರುವ ಕಂದನ
ಎತ್ತಿಕೊಳಲು ಬಾಗಿ
ತಾಯ ತೆರದಲಿ ಬಾನು ತೋರಿತು
ಯಾವ ಕಂದನ ಕೂಗಿದು

ಎಂಬಲ್ಲಿ ಅವರ ವಾಸ್ತವ ಬದುಕಿನ ಅತೀಂದ್ರಿಯತ್ವದ ಔನ್ನತ್ಯವನ್ನು ಕಾಣದೇ ಇರಲಾಗದು. ಬುವಿಗೆ ಬಾನು ತಾಯಿಯಾಗಿ ವೃಕ್ಷಗಳಿಗೆ ಹಾಲು ಕುಡಿಸುವ ಅನುಭವ ಅವರ ಕಾವ್ಯಕ್ಷೇತ್ರದ ದೀರ್ಘಕಾಲದ ತಪಸ್ಸಿನ ಫಲವೆಂಬುದು ಹೊಳೆಯುವದು. ನಾಟಕಕ್ಷೇತ್ರದಲ್ಲಿ ಪುರಾಣಿಕರದು ಮೇಲುಗೈ. ತಮ್ಮ ರಜತರೇಖೆಯಲ್ಲಿ ಕವಿ ತತ್ವದರ್ಶಿ, ವಿಜ್ಞಾನಿ, ನರ್ತಕಿ, ರಾಜಕಾರಣ, ವಿರಹಿಣಿ ಮುಂತಾದ ಭಾವಗಳು ಅವರ ಸೌಂದರ್ಯಚಿಂತನ-ರಸಚಿಂತನಕ್ಕೆ ಸಾಕ್ಷಿಯಾಗಿವೆ. 'ಮಧುಮಹೋತ್ಸವ' ವಸಂತನ ಚೈತನ್ಯಕ್ಕೆ ಸಾಕ್ಷಿಯಾಗಿದ್ದರೆ, 'ತುಂಗಭದ್ರೆ ಮಂಗಲೆ' ಕನ್ನಡನಾಡಿನ ನದಿಗಳೇ ಪಾತ್ರಗಳಾಗಿ ಜನಮನವನ್ನು ತುಂಬಿವೆ. 'ಆತ್ಮಾರ್ಪಣ' ಅವರ ಪ್ರಥಮ ನಾಟಕ. ಬಸವಣ್ಣನವರ ದಿವ್ಯಜೀವನಕ್ಕೆ ಸಂಬಂಧಿಸಿದ ವಸ್ತುವಿದು. 'ಭಾರತವೀರ' ಅವರನ್ನು ರಾಷ್ಟ್ರಪ್ರೇಮಿಯನ್ನಾಗಿಸಿದೆ. "ರಾಷ್ಟ್ರವೇ ದೇವರು, ರಾಷ್ಟ್ರರಕ್ಷಣೆಯೇ ಧರ್ಮ, ಶತ್ರುಸಂಹಾರವೇ ಪೂಜೆ, ಸ್ವಾತಂತ್ರ್ಯವೇ ಪ್ರಸಾದ" ಎಂಬುದು ಅವರ ಸತ್ಯವಾಕ್ಯ. 'ಮೋಹನಮಂತ್ರ' ಗಾಂಧೀಮಂತ್ರದ ಪ್ರಭಾವಕ್ಕೆ ಸಾಕ್ಷೀಭೂತ ಕೃತಿಯಾದಂತೆ 'ಮಾಯಾ ಕೋಲಾಹಲ', 'ಪಾನಿಗೆ ಶ್ರದ್ಧಾಂಜಲಿ', 'ದುಃಖಸೇತುವೆ' ಅವರ ಸಾಧನೆ ಸಿದ್ಧಿಯ ಪತಾಕೆಗಳೆನಿಸಿವೆ. ಸ್ವತಂತ್ರವಸ್ತುವನ್ನು ಆಯ್ದುಕೊಂಡು ಅದರ ವಿನ್ಯಾಸದಂತೆ ವಿಶಿಷ್ಟ ಚೌಕಟ್ಟಿಗೆ ಹೊಂದಿಸುವಲ್ಲಿ ಸಿದ್ದಯ್ಯ ಪುರಾಣಿಕರದು ನುರಿತ ಕೈ. 'ಕವಿಹೃದಯ ನಾಟಕವಾಗಿ ನರ್ತಿಸಿದೆ ಹಾಡಾಗಿ ಹಾಡಿದೆ' ಎಂಬುದು ಅವರ ಕೃತಿಯ ಸವಿಯುಣ್ಡವರ ಹೇಳಿಕೆ.

ಪ್ರಕೃತಿಯ ಸೌಂದರ್ಯವನ್ನು ಕಂಡು ಆನಂದಿಸಿ ಹಾಡಿದ ಕವಿಹೃದಯ ಸಮಾಜದಲ್ಲಿ ತಾಂಡವವಾಡುವ ಕಂದಾಚಾರಗಳನ್ನು ನೋಡಿದಾಗ ಸಿಡಿದು ನಿಂತಿದೆ. ಬಡವರ ರಕ್ತಹೀರಿ ಮೆರೆವ ಶ್ರೀಮಂತರನ್ನು ಕಂಡಾಗ ಅವರ ಹೃದಯ ಕಂದಿದು ಸುಣ್ಣದ ಹರಳಾಗಿದೆ. 'ಮಾನವರೆಲ್ಲ ಒಂದು' ಎಂಬ ಭಾವ ಮೂಡಿಸಲು ಹೆಣಗಿದ್ದಾರೆ. ಅವರೇ ಒಂದೆಡೆ ಹೇಳಿದಂತೆ 'ಮಾನವರೆಲ್ಲ ಒಂದೇ ಎನ್ನುವ ಭಾವನೆ ಮೊಳೆದಿಲ್ಲ; ಸಕಲರ ಹಿತವೇ ಶಾಶ್ವತ ಶಾಂತಿಯು ಎಂಬುದೆ ಹೊಳೆದಿಲ್ಲ' ಎಂದು 'ಮಾನಸಸರೋವರ'ದ ಮಾಖರ್ಜಿನಲ್ಲಿ ಆದ ಉಳಿತಾಯ. 'ಗಣರಾಜ್ಯ ಬಂದು ಗುಣರಾಜ್ಯ ಕರಗಿಹೋಯಿತೆಂದು ಜಾತೀಯ ಜಗಳ ಹೆಚ್ಚಿ ದೇಶವೇ ಮರೆತು ಹೋಯ್ತೆಂದು' ಅವರು ಚಿಂತಿಸಿದ್ದಾರೆ.

'ಶರಣಚರಿತಾಮೃತ' ಅವರ ಇನ್ನೊಂದು ಮಹತ್ವದ ಕೃತಿ. ನೂತನ, ಪುರಾತನ ಶರಣರ ಜೀವನ ಚರಿತ್ರೆ ಹೊತ್ತ ಕೃತಿ. ಆಧ್ಯಾತ್ಮ ಅನುಭಾವಗಳು ವ್ಯಕ್ತಿಯ ಜೀವನದಲ್ಲಿ ಬೆರೆತಾಗ ಆ ವ್ಯಕ್ತಿ ಯಾವ ಮಟ್ಟಕ್ಕೆ ಏರಬಲ್ಲನೆಂಬುದಕ್ಕೆ ಸಾಕ್ಷಿಯಾದ ಕೃತಿ.

ಅವರ 'ವಚನೋದ್ಯಾನ' ಕನ್ನಡವನ್ನು ವಿಶ್ವಸಾಹಿತ್ಯದ ಔನ್ನತ್ಯಕ್ಕೇರಿಸಿದ ವಚನಸಾಹಿತ್ಯದ ಆಧುನಿಕ ನಿರೂಪಣೆ. ಅನುಭಾವಿ ಗದ್ಯಗೀತಗಳು ಅವರ ಬದುಕಿನ ವಾಸ್ತವಿಕತೆಗೆ ಕನ್ನಡಿ ಹಿಡಿದಿವೆ. ಸಿದ್ದಯ್ಯ ಪುರಾಣಿಕರ ಒಟ್ಟು ಸಾಹಿತ್ಯವನ್ನು ಅವಲೋಕಿಸಿದಾಗ ಚಿನ್ನ ಹಳೆಯದಾದರೂ ಅಭಿರುಚಿಗನುಗುಣವಾಗಿ ಹಾಕಿದ ಒಪ್ಪ ಹೊಸದು ಎಂಬ ವಿಚಾರ ಹೊಳೆಯದೆ ಇರದು– ಅವರ ಕವನಗಳ ಸಂಗ್ರಹ ನಿಷ್ಠಾವಂತ ಕಾವ್ಯೋಪಾಸಕನ ಮನವನ್ನು ಬಿಂಬಿಸಿವೆ. ಅವರ ಪ್ರತಿಭಾಶಕ್ತಿ ಉಪಮೆ ರೂಪಕಗಳ ಮೂಲಕ ಸಾಕಾರತೆ ಪಡೆದಿದೆ.

ಇಂಥ ಮಹತ್ವಪೂರ್ಣ ಕೃತಿರಚನೆ ಮಾಡಿ ಸಾಹಿತ್ಯಕ್ಷೇತ್ರದಲ್ಲಿ ಚಿರ ಹೆಸರು ಗಳಿಸಿಕೊಂಡ ಸಿದ್ದಯ್ಯನವರು ೧೯೪೫ ಹರಪನಹಳ್ಳಿ ಸಾಹಿತ್ಯಸಮ್ಮೇಳನದ ಸಾಹಿತ್ಯಗೋಷ್ಠಿ, ೧೯೪೮ ರ ಕಲ್ಬುರ್ಗಿ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷ, ೧೯೫೫ ರಲ್ಲಿ ಮೈಸೂರಿನ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಯ ಅಧ್ಯಕ್ಷರು, ೧೯೫೮ ಬೀದರ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದು ಅವರ ಗೌರವಕ್ಕೆ ಸೂಚನೆಯಾಗಿವೆ. ಕನ್ನಡ ಕೋಶ ಸಮಿತಿ ಮತ್ತು ಸಾಹಿತ್ಯ ಅಕಾಡೆಮಿಯಂತಹ ವರಿಷ್ಠ ಮಂಡಳಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸದ್ಯಕ್ಕೆ ಸಿದ್ಧಯ್ಯ ಪುರಾಣಿಕ ಟ್ರಸ್ಟದಿಂದ ಪ್ರತಿವರ್ಷ ಮಕ್ಕಳ ಕೃತಿಗೆ ಸಾವಿರ ರೂ.ಗಳ ಬಹುಮಾನ ಕೊಡುವ ಕಾರ್ಯ ಹಮ್ಮಿಕೊಂಡಿದ್ದಾರೆ. ಶಿಕ್ಷಣ ಇಲಾಖೆಯ ಸೆಕ್ರೆಟರಿಯಾಗಿದ್ದಾಗ

೧೯೬೦ ರಲ್ಲಿ ಮಕ್ಕಳ ಸಾಹಿತ್ಯ ರಚನಾಲಯ ಸಂಘಟಿಸಿ ಮಕ್ಕಳ ಸಾಹಿತ್ಯ ರಚನೆ ಕುರಿತು ತರಬೇತಿ ನೀಡಿಸಿದರು. ಆಗ ರಚನಾಲಯದಲ್ಲಿ ಭಾಗವಹಿಸಿದ ‘ಸಿಸು’ ಸಂಗಮೇಶ, ಶಂ. ಗು. ಬಿರಾದಾರ, ಪಂಚಾಕ್ಷರಿ ಹಿರೇಮಠ, ಉಳವೀಶ, ಬಿ. ಶ್ರೀ. ಪಾಂಡುರಂಗರಾವ, ಸಚ್ಚಿದಾನಂದ ಮುಂತಾದವರು ಮಕ್ಕಳಸಾಹಿತ್ಯ ರಚನೆಯಲ್ಲಿ ಈಗಲೂ ನಿರತರಾಗಿದ್ದಾರೆ. ಪರದೇಶಗಳಲ್ಲಿ ಪ್ರವಾಸ ಕೈಕೊಂಡಾಗ ಮಕ್ಕಳ ಜ್ಞಾನವೃದ್ಧಿಗೆ ಮನರಂಜನೆಗೆ ಪೋಷಕ ವಾಗುವ ಪ್ರದೇಶಗಳನ್ನು ಸಂದರ್ಶಿಸಿ ಬಂದಿದ್ದಾರೆ. ತಮ್ಮ ಅನುಭವಗಳನ್ನು ಮಕ್ಕಳ ಮನಸ್ಸಿಗೆ ಆಕರ್ಷಕ ವಾಗುವಂತೆ ಸಚಿತ್ರವಾಗಿ ಮಕ್ಕಳ ಪುಸ್ತಕ ರೂಪದಲ್ಲಿ ತರುವ ಯೋಜನೆ ಹಮ್ಮಿಕೊಂಡಿದ್ದಾರೆ. ಇಂಥವರು ರಾಜ್ಯಮಟ್ಟದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದುದು ಮಕ್ಕಳ ಭಾಗ್ಯವಲ್ಲದೆ ಬೇರೇನೂ ಅಲ್ಲ. ಅಂಥವರ ಬದುಕು ಮುಂದಿನ ಮಕ್ಕಳಿಗೆ ದಾರಿದೀಪವಾಗಲಿ. ಅವರು ಚಿರಕಾಲವಿದ್ದು ಮಕ್ಕಳ ಸಾಹಿತ್ಯ ಸೇವೆ ಕೈಕೊಳ್ಳಲಿ ಎಂದು ಆಶಿಸಿ ಅವರಿಗೆ ಉತ್ತರೋತ್ತರ ಯಶಸ್ಸನ್ನು ಕೋರುತ್ತೇವೆ.

ಡಾ. ಚೆನ್ನಕ್ಕ ಎಲಿಗಾರ





ಮುರುಘಾಮಠದ ಪೂಜ್ಯ ಮಹಾಂತಪ್ಪಗಳಿಂದ ಸಮ್ಮೇಳನದ ಉದ್ಘಾಟನೆ
ಸಮ್ಮೇಳನಾಧ್ಯಕ್ಷರಾದ, ಡಾ. ಸಿದ್ಧಯ್ಯ ಪುರಾಣಿಕ, ಸ್ವಾಗತಾಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ
ಸಚಿವ ಶ್ರೀ ಯಹಾವಗಲ್ಲ



ಬೃಹತ್ ಸಮುದಾಯವನ್ನು ಸ್ವಾಗತಿಸುತ್ತಿರುವ
ಸ್ವಾಗತಾಧ್ಯಕ್ಷ ಶ್ರೀ ಚಂದ್ರಕಾಂತ ಬೆಲ್ಲದ



ಪ್ರದರ್ಶನವನ್ನು ಉದ್ಘಾಟಿಸುತ್ತಿರುವ
ತುಮಕೂರಿನ ಬಾಲಿಕೆ ಬಿ. ಪ್ರೇಮಲತಾ